# ಬೆಳಕಿನ ನೆರಳು

**ಮಹಾತ್ಮ ಮತ್ತು ಹರಿಲಾಲ್**


■ ಮೂಲ: **ದಿನಕರ್ ಜೋಶಿ**

■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**

ಕಲೆ: ಮನೋಹರ ಆಚಾರ್ಯ


## ಮಿಲ್‌ನಲ್ಲಿ ಕೆಲಸಕ್ಕೆ ಸೇರಿದ ಹರಿಲಾಲ

'ಈ ವಿಷವನ್ನು ಕಕ್ಕಿದ ನಂತರ ಹರಿಲಾಲನ ಮನಸ್ಸು ಹಗುರವಾಗಿರಬೇಕೆಂದು ನನಗೆ ಅನ್ನಿಸುತ್ತದೆ. ಅವನಿಗೆ ನೆಮ್ಮದಿ ಲಭಿಸಿರಬಹುದು. ಒಳ್ಳೆಯದಾಯಿತು. ಇದೆಲ್ಲವೂ ಈಗ ಸಾರ್ವಜನಿಕ ವಾಯಿತು. ಹರಿಲಾಲನಿಗೆ ಈ ಬಗ್ಗೆ ಮುಂದೊಂದು ದಿನ ಖಂಡಿತ ಪಶ್ಚಾತ್ತಾಪವಾಗುವುದು.'

ಅತ್ತ ಬಾಪೂ ಅವರ ಹೆಸರಿಗೆ ಪತ್ರವನ್ನು ಅಂಚೆಗೆ ಹಾಕಿದ ನಂತರ ಹಗುರನಾದ ಹರಿಲಾಲ ವಾಸ್ತವಿಕತೆಯೆಡೆಗೆ ದೃಷ್ಟಿಯನ್ನು ಹರಿಸಿದ. ಈಗ ಅವನು ಸಂಪೂರ್ಣವಾಗಿ ಕಠೋರ ಪರಿಸ್ಥಿತಿಗಳೊಂದಿಗೆ ಸುತ್ತುವರೆಯಲ್ಪಟ್ಟಿದ್ದ. ಪತ್ರದ ಪ್ರತಿಗಳನ್ನು ಮುದ್ರಿಸುವುದು ಮತ್ತು ಪತ್ರದ ಅಷ್ಟೊಂದು ಪ್ರತಿಗಳನ್ನು ಅಂಚೆಗೆ ಹಾಕಿದ ನಂತರ ಅವನ ಬಳಿ ತುಂಬಾ ಕಡಿಮೆ ಹಣ ಉಳಿದಿತ್ತು. ಒಂದು ವೇಳೆ ತಕ್ಷಣ ಹಣಕ್ಕೆ ವ್ಯವಸ್ಥೆ ಮಾಡದಿದ್ದರೆ, ನೀರು ತಲೆಯ ಮೇಲಿಂದ ಹಾದು ಹೋಗುವುದು. ಪರಿಸ್ಥಿತಿ ಗಂಭೀರವಾಗಿತ್ತು. ಹೆಂಡತಿ ಮತ್ತು ಮಕ್ಕಳ ಚಿಂತೆ ಕಾಡಿತು. ಈ ಹತಾಶೆಯ ನಡುವೆ ಅಕಸ್ಮಾತ್ ಅವನಿಗೆ ಸೇಠ್ ನರೋತ್ತಮದಾಸರ ನೆನಪಾಯಿತು. ನರೋತ್ತಮದಾಸರೊಂದಿಗೆ ಅವನ ಪರಿಚಯ ಹಸುರಾಗಿಯೇ ಇತ್ತು. ತನಗೆ ನರೋತ್ತಮದಾಸರ ದೃಷ್ಟಿಯಲ್ಲಿ ಒಳ್ಳೆಯ ಛವಿ ಇದೆ ಎಂಬುದನ್ನು ಅವನು ಮನಗಂಡ. ಒಂದು ವೇಳೆ ತಾನು ಈ ಪರಿಚಯದ ನೆಪದಲ್ಲಿ ಹಾಗೂ ಈ ವೇಳೆಯಲ್ಲಿ ಅವರಿಂದ ಯಾವುದೇ ಲಾಭವನ್ನು ಪಡೆದರೆ ತಪ್ಪಲ್ಲವೆಂದು ಹರಿಲಾಲನಿಗೆ ಅನ್ನಿಸಿತು. ನರೋತ್ತಮದಾಸರ ವ್ಯಾಪಾರ ಮತ್ತು ಕೊಡು ಕೊಳ್ಳುವಿಕೆ ವಿಸ್ತಾರವಾಗಿ ಹರಡಿದ್ದು, ಅವರು ಅದನ್ನು ಬೇಕಾದಲ್ಲಿ ತೊಡಗಿಸಬಹುದು.

ಹೀಗೆ ತೀರ್ಮಾನಿಸಿದ ಕೂಡಲೇ ಹರಿಲಾಲ ಮತ್ತೊಮ್ಮೆ ಮುಂಬೈಗೆ ಹೊರಟ. ಒಂದು ಕ್ಷಣವನ್ನೂ ವ್ಯರ್ಥ ಮಾಡದೆ ಸೇಠ್ ನರೋತ್ತಮದಾಸರ ಕಚೇರಿಗೆ ಹೋದ. ಹರಿಲಾಲನೊಂದಿಗೆ ಇಷ್ಟು ಶೀಘ್ರ ಭೇಟಿಯಾಗುವುದೆಂದು ಸೇಠ್ ನರೋತ್ತಮದಾಸರು ನಿರೀಕ್ಷಿಸಿರಲಿಲ್ಲ. ಆದರೂ ಅವರು ಹರಿಲಾಲನನ್ನು ಭೇಟಿಯಾಗಿ ತಮ್ಮ ಸಂತಸವನ್ನು ವ್ಯಕ್ತಪಡಿಸಿದರು. ಬಾಪೂ ಅವರ ಕ್ಷೇಮಸಮಾಚಾರವನ್ನು ವಿಚಾರಿಸಿದರು. ಅವನನ್ನು ಅದ್ದೂರಿಯಾಗಿಯೇ ಸ್ವಾಗತಿಸಿದರು. ನಂತರ ಹರಿಲಾಲ ತನ್ನ ಭೇಟಿಯ ಉದ್ದೇಶವನ್ನು ಸ್ಪಷ್ಟಪಡಿಸಿದ 'ಸೇಠ್‌ಜಿ, ನಾನು ಬಾಪೂ ಅವರಿಂದ ಪ್ರತ್ಯೇಕಗೊಂಡಿರುವುದು ನಿಮಗೆ ತಿಳಿದೇ ಇದೆ. ನನ್ನ ಜೀವನನಿರ್ವಹಣೆಗಾಗಿ ಒಂದು ಕೆಲಸವನ್ನು ಹುಡುಕುತ್ತಿದ್ದೇನೆ.'

'ನಿನ್ನಂಥ ತೇಜಸ್ವಿ ವ್ಯಕ್ತಿಗೆ ಕೆಲಸದ ಕೊರತೆಯಾಗಲು ಸಾಧ್ಯವೇ?' ನರೋತ್ತಮದಾಸರು ನಗುತ್ತಾ ಹೇಳಿದರು, 'ಇಂದು ನಂಬಿಕಸ್ಥ ಮತ್ತು ಶ್ರಮಜೀವಿ ಮನುಷ್ಯ ಎಲ್ಲಿ ಸಿಗುತ್ತಾನೆ? ಹೇಳು ಹರಿಲಾಲ, ನೀನು ಬಯಸಿದರೆ ನಿನ್ನನ್ನು ನನ್ನ ಮಿಲ್ ಕೆಲಸಕ್ಕೆ ಸೇರಿಸಿಕೊಳ್ಳಲೇ?' 'ನಿಮ್ಮ ಉಪಕಾರವನ್ನು ಮರೆಯುವುದಿಲ್ಲ, ಸೇಠ್‌ಜಿ.'

ಹರಿಲಾಲನಿಗೆ ಸಂತೋಷವಾಯಿತು. ಅದೆಷ್ಟೋ ದಿನಗಳಿಂದ ಮನಸ್ಸು ಭಾರವಾಗಿತ್ತು, ಅದು ಒಂದು ಕ್ಷಣದಲ್ಲಿಯೇ ಹಗುರವಾಯಿತು. 'ಸರಿ. ನೀನು ಸ್ವಲ್ಪ ದಿನ ನಮ್ಮ ಸೋಲಾಪುರದ ಕಚೇರಿಯಲ್ಲಿ ಕೆಲಸಗಳನ್ನು ಕಲಿತುಕೋ. ನಂತರ ನಾನು ನಿನ್ನನ್ನು ಕಲ್ಕತ್ತಾದಲ್ಲಿರುವ ಮಿಲ್‌ನ ಕಚೇರಿಗೆ ಇನ್‌ಚಾರ್ಜ್ ಆಗಿ ಕಳುಹಿಸುತ್ತೇನೆ... ಹೇಳು... ಆಗುತ್ತ?' ನರೋತ್ತಮದಾಸರು ಸಹಜವಾಗಿಯೇ ಕೇಳಿದರು. 'ಸೇಠ್‌ಜಿ, ನೀವು ನನ್ನನ್ನು ನಂಬಿ,' ಹರಿಲಾಲ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾ ಹೇಳಿದ, 'ನಿಮ್ಮ ವಿಶ್ವಾಸಕ್ಕೆ ಕುಂದು ಬರದಂತೆ ಕೆಲಸಗಳನ್ನು ಮಾಡುತ್ತೇನೆ... ನಾನು ಸೋಲಾಪುರಕ್ಕೂ ಹೋಗುತ್ತೇನೆ...ಕಲ್ಕತ್ತಾಕ್ಕೂ ಹೋಗುತ್ತೇನೆ...'

ನೌಕರಿಯನ್ನು ಗಟ್ಟಿ ಮಾಡಿಕೊಂಡ ಹರಿಲಾಲ, ಪರಿವಾರಕ್ಕೆ ವ್ಯವಸ್ಥೆಯನ್ನು ಮಾಡಲು ಅಹಮದಾಬಾದ್‌ಗೆ ಮರಳಿ ಬಂದಾಗ ಅವನ ಮನಸ್ಸು ಉತ್ಸಾಹದಿಂದ ಕುಣಿಯುತ್ತಿತ್ತು, ಅವನ ಮುಖದಲ್ಲಿ ಹೊಸ ಭರವಸೆಯೊಂದು ಮಿನುಗುತ್ತಿತ್ತು.

### ಇಪ್ಪತ್ತೊಂದು

ಹರಿಲಾಲನಿಗೆ ಸೋಲಾಪುರದ ನೌಕರಿ ಹೊಸದಾಗಿತ್ತು, ಅಲ್ಲಿಯ ಸ್ಥಳ ಸಹ ಅಪರಿಚಿತವಾಗಿತ್ತು. ನೌಕರಿಯಿಂದಾಗಿ ಅಕ್ಕಪಕ್ಕದ ಪ್ರದೇಶಗಳಿಗೆ ಪ್ರಯಾಣ ಸಹ ಮಾಡಬೇಕಿತ್ತು. ಈ ಎಲ್ಲಾ ಸಂಗತಿಗಳ ಬಗ್ಗೆ ಯೋಚಿಸಿದ ಹರಿಲಾಲ, ಪ್ರಸ್ತುತ ತನ್ನ ಕುಟುಂಬವನ್ನು ತನ್ನೊಂದಿಗೆ ಕರೆದೊಯ್ಯುವುದಿಲ್ಲವೆಂದು ನಿರ್ಧರಿಸಿದ್ದ. ಹೆಂಡತಿ ಮತ್ತು ಮಕ್ಕಳು ಸ್ವತಂತ್ರವಾಗಿ ಅಹಮದಾಬಾದ್‌ನ ಮನೆಯಲ್ಲಿ ಜೀವನವನ್ನು ಸಾಗಿಸಬೇಕು ಅಥವಾ ರಾಜಕೋಟಕ್ಕೆ ಹೋಗಿ ಗುಲಾಬ ತನ್ನ ತವರು ಮನೆಯಲ್ಲಿಯೂ ಇರಬಹುದು ಎಂದು ಹರಿಲಾಲ ಯೋಚಿಸುತ್ತಿದ್ದ. ಮೂರನೆಯ ವಿಚಾರವೊಂದು ಸಹ ಅವನ ಮನಸ್ಸಿಗೆ ಬಂದಿತ್ತು. ಆಫ್ರಿಕಾದಿಂದ ಬರುತ್ತಲೇ ಬಾ ಅವರು ಹೇಳಿದ್ದನ್ನು ಹರಿಲಾಲ ಮರೆತಿರಲಿಲ್ಲ. ಹರಿಲಾಲ ತನ್ನ ಪರಿವಾರದೊಂದಿಗೆ ತಮ್ಮೊಂದಿಗೇ ಇದ್ದರೆ ಎಷ್ಟು ಚೆಂದವೆಂಬುದು ಬಾ ಅವರ ಆಸೆಯಾಗಿತ್ತು. ಆದರೆ ಅವನು ಪ್ರಸ್ತುತ ಬಾ ಅವರ ಆಸೆಯನ್ನು ಈಡೇರಿಸುವ ಸ್ಥಿತಿಯಲ್ಲಿರಲಿಲ್ಲ.

